ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

# ಪತ್ರಿಕಾ ತುಣುಕುಗಳು
# PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೋರ್ಟ್ ಸುದ್ದಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 23/10/2019

## ಕೈ ನಡೆಗೆ ಸುಪ್ರೀಂ ತರಾಟೆ

23/10

**ವಿಕಸುದ್ದಿಲೋಕ** ಹೊಸದಿಲ್ಲಿ

ಸುಪ್ರೀಂನಲ್ಲಿ ಅನರ್ಹರ ಕುರಿತ ವಿಚಾರಣೆ ಇತ್ಯರ್ಥದ ತನಕ ಹೈಕೋರ್ಟ್‌ನಲ್ಲಿನ ಕಾಂಗ್ರೆಸ್ ಪಕ್ಷ ಸಲ್ಲಿಸಿರುವ ಅರ್ಜಿ ವಿಚಾರಣೆಗೆ ತಡೆ ನೀಡುವಂತೆ ಸುಪ್ರೀಂಕೋರ್ಟ್‌ಗೆ ಮಂಗಳವಾರ ಚುನಾವಣೆ ಆಯೋಗವು ಮೇಲ್ಮನವಿ ಸಲ್ಲಿಸಿದೆ.

ಆಯೋಗದ ವಾದಕ್ಕೆ ಪ್ರತಿಕ್ರಿಯೆ ನೀಡಿದ ಕೆಪಿಸಿಸಿ ಪರ ವಕೀಲ ಕಪಿಲ್ ಸಿಬಾಲ್, ''ರಾಜ್ಯದಲ್ಲಿ ನೀತಿ ಸಂಹಿತೆ ಜಾರಿ ಇದ್ದರೂ ಸರಕಾರ ಉಲ್ಲಂಘನೆ ಮಾಡುತ್ತಿದೆ. ಅನರ್ಹ ಶಾಸಕರ ಕ್ಷೇತ್ರಗಳಿಗೆ ಅನುದಾನ ವಿನಿಯೋಗಿಸುತ್ತಿದೆ. ಸರಕಾರ ಅನರ್ಹರ ಪರ ಒಲವು ತೋರಿದ್ದನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿದೆ,'' ಎಂದರು

ಕೆಪಿಸಿಸಿ ನಿರ್ಧಾರವನ್ನು ತರಾಟೆಗೆ ತೆಗೆದುಕೊಂಡ ನ್ಯಾ.ರಮಣ್ ನೇತೃತ್ವದ ಸುಪ್ರೀಂಕೋರ್ಟ್ ''ಇಲ್ಲಿ ವಿಚಾರಣೆ ನಡೆದಾಗ ಹೈಕೋರ್ಟ್‌ನಲ್ಲಿ ವಿಚಾರಣೆ ಜರುಗುವುದು ಸೂಕ್ತವಲ್ಲ, ಹೈಕೋರ್ಟ್ ವಿಚಾರಣೆಗೆ ತಡೆ ನೀಡುವಂತೆ ಮೇಲ್ಮನವಿ ಸಲ್ಲಿಸಲು ಚುನಾವಣಾ ಆಯೋಗಕ್ಕೆ ಮಂಗಳವಾರ ಸೂಚಿಸಿ, ಬುಧವಾರಕ್ಕೆ ವಿಚಾರಣೆ ಮುಂದೂಡಿತು ಬುಧವಾರದಿಂದ ಶುಕ್ರವಾರದವರೆಗೂ ಸುಪ್ರೀಂ ನಲ್ಲಿ ಅನರ್ಹ ಶಾಸಕರ ವಿಚಾರಣೆ ನಿರಂತರ ಜರುಗುವುದರಿಂದ ಅನರ್ಹ ಶಾಸಕರು ಮಂಗಳವಾರ ಬೆಳಗ್ಗೆಯೇ ದಿಲ್ಲಿಯ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ.